ಶ್ರೀ ಎಂ ಪಿ ಪ್ರಕಾಶ್ – ಆಗಬಹುದು

ರಾಜ್ಯದಲ್ಲಿರುವ I.F.S. ಅಧಿಕಾರಿಗಳು

149 (1254) ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) – ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಖಿಲ ಭಾರತ ಅರಣ್ಯ ಸೇವಾ ಶ್ರೇಣಿಯ (IFS) ಅಧಿಕಾರಿಗಳು ಎಷ್ಟು ಜನ ಸೇವೆ ಸಲ್ಲಿಸಿರುತ್ತಾರೆ,

ಆ) ಇವರಿಗಾಗಿ ಪ್ರತಿ ವರ್ಷ ಖರ್ಚಾಗುವ ಸಂಬಳ ಮತ್ತು ಇತರೆ ಭತ್ಯೆ ಎಷ್ಟು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯ ಮಂತ್ರಿಯವರು)

ಅ) 161

ಆ) ಸಂಬಳ (ಮೂಲ ವೇತನ)	4,84,28,550
ಇತರೆ ಭತ್ಯೆ	1,78,41,873
ಒಟ್ಟು	**6,62,70,423**

ಶ್ರೀ ಕೆ ಆರ್ ರಮೇಶ್ ಕುಮಾರ್ – 161 ಜನರಿದ್ದಾರೆಂದು ತಾವು ಹೇಳಿದ್ದೀರಿ ಒಂದು ವರ್ಷಕ್ಕೆ 6,62,70,423=00 ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದೀರಿ ನಮ್ಮ ರಾಜ್ಯಕ್ಕೆ ಈ IFS ಶ್ರೇಣಿಯ ಅಧಿಕಾರಿಗಳು ಎಷ್ಟು ಜನರು ಇರಬೇಕೆಂದು, ಇಷ್ಟು ಅಗತ್ಯವಿದೆಯೆಂದು ಹೇಳಿ, ಗುರ್ತಿಸಿ, ನಿಗದಿ ಮಾಡತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕಿದೆಯೇ? ಇಲ್ಲವೇ ಕೇಂದ್ರ ಸರ್ಕಾರಕ್ಕಿದೆಯೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು, ಅರಣ್ಯ ಸಚಿವರ ಪರವಾಗಿ) – ಮಾನ್ಯ ಅಧ್ಯಕ್ಷರೆ, ನನಗೆ ತಿಳಿದ ಮಟ್ಟಿಗೆ IAS, IPS, All India Services ಅಧಿಕಾರಿಗಳು ನಮಗೆ ಎಷ್ಟು ಮಂದಿ ಅಗತ್ಯತೆ ಇದೆಯೆಂದು ರಾಜ್ಯ ಸರ್ಕಾರದ ಪತ್ರದ ಮೇಲೆ ಅವರ ನಿರ್ಧಾರ ಮಾಡಿ ಕಳುಹಿಸಿಕೊಡುತ್ತಾರೆ ಆ ಪ್ರಕಾರ ಇಲ್ಲಿ IFS ಅಧಿಕಾರಿಗಳು ಸೇರಿ 2,200 ಜನರು ಒಟ್ಟು All India Cadre ನಲ್ಲಿರುವವರು

ಅದರಲ್ಲಿ ಸರ್ಕಾರದ ಹಿರಿಯ ಹುದ್ದೆಗಳು ಸುಮಾರು 100 ಇರುತ್ತವೆ ಕೇಂದ್ರದ ನಿಯೋಜನೆ ಹುದ್ದೆಗಳು 20 ಇವೆ ಆದರೆ, ಈ 20 ಕ್ಕೆ ವಿರುದ್ಧವಾಗಿ 47 ಜನರು ಕೆಲಸ ಮಾಡತಕ್ಕಂಥಾದ್ದು ಇಲ್ಲಿದೆ ಕರ್ನಾಟಕಕ್ಕೆ ಈಗ sanctioned strength 164 ಇದೆ ಇದು ಒಪ್ಪಿತವಾಗಿರತಕ್ಕಂಥಾದ್ದು ಇಲ್ಲಿ present utilization 162 ಇದೆ ಆದ್ದರಿಂದ, ನಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಇವರು ಬಂದಿರತಕ್ಕಂಥವರು ಇದ್ದಾರೆ ಆದರೆ, ಅರಣ್ಯಕ್ಕಾಗಿ ನಾವು ಖರ್ಚು ಮಾಡುವುದು ಕೇವಲ 27 ಕೋಟಿ ರೂಪಾಯಿಗಳು ಆದರೆ 20 ಕೋಟಿ ರೂಪಾಯಿಗಳನ್ನು ಈ ಅಧಿಕಾರಿಗಳ ಮೇಲೆ, ಅವರ ಸಂಬಳ-ಸಾರಿಗೆಗಾಗಿ ಖರ್ಚು ಮಾಡುತ್ತೇವೆ ಅವರು ಮಾಡಬೇಕಾದಂತಹ ಕೆಲಸ ಮಾತ್ರ 27 ಕೋಟಿ ಇದೆ ಇದು ನಿಜವಾಗಿಯೂ ಕೂಡ ಸರಿಯಾದದ್ದಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ – ನೀವು ಇವರುಗಳನ್ನು ಎಲ್ಲೆಲ್ಲಿಗೆ ಕಳುಹಿಸಿದ್ದೀರಿ? CEO ಗಳಾಗಿ ಕಳುಹಿಸಿದ್ದೀರಿ, Youth Service ಗೆ ಕಳುಹಿಸಿದ್ದೀರಿ, ಬೇರೆ ಬೇರೆ ಎಲ್ಲಾ ಇಲಾಖೆಗಳಿಗೂ ಕಳುಹಿಸಿದ್ದೀರಿ ಅಗತ್ಯ ಇರುವುದಕ್ಕಿಂತಲೂ ಹೆಚ್ಚು ಜನರನ್ನು, ಅಗತ್ಯವಿದ್ದಾರೆಂದು demand ಅನ್ನು project ಮಾಡಿ, ಈ ಶನಿಗಳನ್ನೆಲ್ಲಾ ಅಲ್ಲಿಂದ ಇಲ್ಲಿಗೆ ಕರೆಸಿಕೊಂಡು ಕೋಟ್ಯಂತರ ರೂಪಾಯಿಗಳನ್ನು ಇವರಿಗೆ ಸಂಬಳ ಕೊಟ್ಟು, ಇವರನ್ನು ಸಾಕಿ, ನಾವು ಮೈಮೇಲೆ ಬಿಟ್ಟುಕೊಂಡು ನಮ್ಮ ಕಾಡೂ ಬೆಳೆಯಲಿಲ್ಲ, ಅರಣ್ಯವೂ ಅಭಿವೃದ್ಧಿಯಾಗಲಿಲ್ಲ ಮಕ್ಕಳಿಗೆ ಈಜುವುದಕ್ಕೆ ಒಂದು swimming pool ಕೊಡಿ ಎಂದರೆ, ದುಡ್ಡಿಲ್ಲವೆಂದು ಅವರು ಬೊಂಬಡಾ ಹೊಡಿಯುತ್ತಾರೆ ನೋಡಿ, ಸರಾಸರಿ ಲೆಕ್ಕ ಹಾಕಿ 55 ಲಕ್ಷ 22 ಸಾವಿರ ಚಿಲ್ಲರೆ ರೂಪಾಯಿಗಳನ್ನು ಇವರನ್ನು ಸಾಕುವುದಕ್ಕೆ ನಾವು ಪ್ರತಿ ತಿಂಗಳು ಖರ್ಚು ಮಾಡುತ್ತೇವೆ ಪ್ರಕಾಶ್‌ರವರೆ, ನಾನು ಏನು ಹೇಳುತ್ತೇನೆಂದರೆ, the politician should become the policy matter The Bureaucrat shall have discretion only to implement, execute the order of the politicians Unfortunately, we have failed to frame the policies They have been administering, they have been making policies also ನಾವು

ಏನು ಮಾಡುತ್ತೇವೆ, ವರ್ಗಾವರ್ಗಿಗೆ ಹೋಗುತ್ತೇವೆ We try to administer, which is not our domain ನಮಗೆ ಈ ಸಂಖ್ಯೆಯನ್ನು ಯಾರು fix ಮಾಡಿದವರು? Do we require so many number of IFS officers? If we require, where have you put them to use? ಅವರ utilization decide ಮಾಡುವವರೇ ನಾವಲ್ಲ Probably this does not come to the notice of any Chief Minister or the Forest Minister And you see, Karnataka has been meadow for these people Sir, with all these people what is the percentage of forest we are having in Karnataka? Is it satisfying? Have you made any specia progress? What a colossal waste See, ನಮಗೆ ಎಷ್ಟು ದುಃಖವಾಗುತ್ತದೆ ಎಂದರೆ, ಅದನ್ನು ಹೇಳುವುದಕ್ಕಾಗುವುದಿಲ್ಲ ದಯಮಾಡಿ ಇದನ್ನು review ಮಾಡಿ ನಮ್ಮ ರಾಜ್ಯ ಸರ್ಕಾರದ ಸೇವೆಗಾಗಿ ಎಷ್ಟು ಜನ ಅಗತ್ಯ ಇದ್ದಾರೆ ಎಂಬುದನ್ನು ನಿಗದಿ ಮಾಡಿಕೊಳ್ಳಿ ಸಾಧ್ಯವಾದಷ್ಟು ಮಟ್ಟಿಗೆ ಇಲ್ಲಿ ಹುಟ್ಟಿ ಬೆಳೆದವರನ್ನು, ಇಲ್ಲಿಂದ promote ಆದವರನ್ನು promote ಮಾಡುವುದಕ್ಕೆ try ಮಾಡಿ ಹೊರಗಡೆಯಿಂದ ಬಂದು ಅವರು ಮಾಡಿರತಕ್ಕಂಥಾದ್ದು ಸಾಕು ನಿಜವಾಗಿಯೂ ಕೂಡ ಉತ್ತರ ಭಾರತದಿಂದ ಅಥವಾ ಅಲ್ಲಿನ ಬೇರೆ ಬೇರ ಭಾಗಗಳಿಂದ IFS ಮಾಡಿಕೊಂಡು ಬಂದು ನಮ್ಮನ್ನು ಉದ್ಧಾರ ಮಾಡಲಿಕ್ಕೆ ಬಂದಿದ್ದಾರೆಯೇ? ಅವರ ಶ್ರಮ ಮತ್ತು ತ್ಯಾಗ ನೋಡಬೇಕೆಂದರೆ, palace Arcade, RMV extension, HSR layout, Indiranagar, Defence Colony, Sadashivanagar ಕ್ಕೆ ಹೋದರೆ, ಅಲ್ಲಿ ಅವರು ಕಟ್ಟಿರುವ ಮನೆಗಳನ್ನು ನೋಡಿದರೆ ಅದು ಗೊತ್ತಾಗುತ್ತದೆ That's all the progress they have made I stand by my allegation May be there are an exceptional few ನಿಮ್ಮ ಮಕ್ಕಳು ಅಥವಾ ನಮ್ಮ ಮಕ್ಕಳು ಒಂದು ಗಾಡಿ ತೆಗೆದುಕೊಂಡರೆ ಅಥವಾ ಒಂದು ಒಳ್ಳೆಯ ಅಂಗಿ ಹಾಕಿಕೊಂಡರೆ, ಅದರ ಬಗ್ಗೆ ಊರೆಲ್ಲಾ ಮಾತನಾಡುತ್ತಾರೆ ಇವರು ಕಣ್ಣುಮುಚ್ಚಿಕೊಂಡು, ಒಬ್ಬರ ಕೈಗೆ ಸಿಗಲಾರದಂತೆ

ಇಡೀ ರಾಜ್ಯವನ್ನು ನುಂಗಿದ್ದಾರೆ ಅವರಿಗೆ ಕೆಲಸವೇ ಇಲ್ಲ IFS cadre ಎಂದು ಕರ್ನಾಟಕದಲ್ಲಿ ನುಸುಳಿಕೊಳ್ಳುತ್ತಾರೆ Youth Service ಗೆ deputation ಎಂದು ಹೋಗುತ್ತಾರೆ, University ಗಳಿಗೆ ಹೋಗುತ್ತಾರೆ Look at the fun ನಮಗೆ ಅವರ ಅಗತ್ಯ ಇದ್ದಿದ್ದರೆ, ಅವರಿಗೆ department ನಲ್ಲಿ ಕೆಲಸ ಕೊಡಬೇಕಾಗಿತ್ತು Department ನಲ್ಲಿ ಕೆಲಸವಿಲ್ಲವೆಂದರೆ ನಮಗೆ ಅವರು ಅಷ್ಟೇನೂ ಅಗತ್ಯವಿಲ್ಲ ಆ ಜನರ ಅಗತ್ಯವಿಲ್ಲವೆಂದರೆ ಅವರು ಇಲ್ಲಿಗೆ ಹೇಗೆ ಬಂದರು? ಅವರನ್ನು ಯಾರು ಬರಮಾಡಿಕೊಂಡರು? ಅದನ್ನು ಹೇಳಿ Kindly enlighten us

ಶ್ರೀ ಕೆ ಜಿ ಬೋಪಯ್ಯ (ಮಡಿಕೇರಿ) – ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ IFS lobby ಹೇಗೆ ಕೆಲಸ ಮಾಡುತ್ತಿದೆ ಎಂದರೆ, ನಮ್ಮ ಕೊಡಗು ಜಿಲ್ಲೆಯಲ್ಲಿ Wild life area ಎಂದು ಇದೆ ಮೊದಲು ಒಬ್ಬ ACF ಅದನ್ನು manage ಮಾಡುತ್ತಿದ್ದರು ಇತ್ತೀಚೆಗೆ ಅಲ್ಲಿಗೊಬ್ಬರು IFS ಅಧಿಕಾರಿಯನ್ನು ಹಾಕಿದ್ದಾರೆ ಜಿಲ್ಲೆಗೆ ಸಂಬಂಧಪಟ್ಟಂತೆ ಇರುವ squad ಅದಾಗಿದೆ ಅವರಿಗೆ ಕೆಲಸವೇನೂ ಇಲ್ಲ ಯಾರಾದರೂ ರೈತರು ಮರ ಕಡಿದರೆ ಅವರಿಗೆ ಕಾಟ ಕೊಡಲಿಕ್ಕೆ ಇರುವಂತಹ ಒಂದು ವಿಭಾಗ ಅದು ಅಲ್ಲಿಗೊಬ್ಬ IFS ಅಧಿಕಾರಿಯನ್ನು ನೇಮಿಸಿದ್ದಾರೆ ಈ ರೀತಿ ವ್ಯವಸ್ಥಿತವಾಗಿ IFS ಗಳನ್ನು ತುಂಬುವಂತಹ ವ್ಯವಸ್ಥೆ ಇವತ್ತು ಆಗುತ್ತಿದೆ ಕರ್ನಾಟಕದಿಂದ promotion ಆಗಿ ಇಬ್ಬರು ಇದ್ದರು, ಅವರನ್ನು ಕಿತ್ತು ಹಾಕಿಬಿಟ್ಟರು ನಮ್ಮ ಜಿಲ್ಲೆಯವರೇ ಇದ್ದರು ಅವರನ್ನು ಕಿತ್ತು ಹಾಕಿ ಅಲ್ಲಿಗೆ IFS ನವರು ಬಂದು ಒಂದು ತಿಂಗಳಾಯಿತು ಕರ್ನಾಟಕದ ನಮ್ಮ ಜಿಲ್ಲೆಯವರಿಗೆ ಇವತ್ತಿನವರೆಗೂ posting ಕೊಟ್ಟಿಲ್ಲ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆದರೂ ಅವರಿಗೆ posting ಕೊಟ್ಟಿಲ್ಲ ಅವರು ಮನೆಯಲ್ಲೇ ಕುಳಿತಿದ್ದಾರೆ ಒಬ್ಬರು ಇನ್ನು retire ಆಗಲಿಕ್ಕೆ ಎರಡು ವರ್ಷ ಮಾತ್ರವಿದೆ ಅವರನ್ನೂ ಕಿತ್ತು ಹಾಕಿದ್ದಾರೆ ಮತ್ತು ಅವರಿಗೂ ಯಾವುದೇ posting ಕೊಟ್ಟಿಲ್ಲ ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ, Mangalore University Registrar ಒಬ್ಬ IFS ಅಧಿಕಾರಿಯಾಗಿದ್ದಾರೆ ಅವರ cadre Additional Conservator of Forest ಆಗಿದೆ ಆದರೆ ಅವರು ಮಂಗಳೂರಿಗೆ ಹೋಗಿ ಅಲ್ಲಿನ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿದ್ದಾರೆ ಈ

ರೀತಿ IFS ನವರು ಸತತವಾಗಿ ಲಾಬಿ ಮಾಡುತ್ತಿದ್ದಾರೆ ನಮ್ಮಲ್ಲಿ IFS ಎಂದರೆ, 'I First Safe' ಎಂದು ಹೇಳುತ್ತಾರೆ ಆ ರೀತಿಯಲ್ಲಿ ಅವರ ಲಾಬಿ ಇದೆ ಈ ರೀತಿಯಾಗಿ ಇವತ್ತು IFS ಗೆ ವಿವರಣೆ ಕೊಡುವಂತಹ ಪರಿಸ್ಥಿತಿ ಇದೆ ಇದಕ್ಕೊಂದು ಕಡಿವಾಣ ಹಾಕಬೇಕು ಕೆಲಸವಿಲ್ಲದೆ TA & DA ತೆಗೆದುಕೊಳ್ಳುವಂತಹ ವ್ಯವಸ್ಥೆ ಆಗುತ್ತಿದೆ ರೈತರಿಗೆ ತೊಂದರೆ ಕೊಡಲಿಕ್ಕೆ ಇರುವಂತಹ ವ್ಯವಸ್ಥೆ ಈ IFS ದ್ದಾಗಿದೆ ಇದಕ್ಕೆ ಕಡಿವಾಣ ಹಾಕಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ

ಶ್ರೀ ಬಿ ಎ ಜೀವಿಜಯ (ಸೋಮವಾರಪೇಟೆ) – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ ಈಗ JBIC first phase programme ನಲ್ಲಿ they have spent about 625 crores ಇನ್ನು second phase ನಲ್ಲಿ 725–750 ಕೋಟಿ ಖರ್ಚು ಮಾಡುತ್ತಿದ್ದಾರೆ ಅದಕ್ಕಾಗಿ ಅವರು programme ಹಾಕಿಕೊಂಡಿದ್ದಾರೆ, models ಎಂದು ಮಾಡಿದ್ದಾರೆ ನಾನು ಅರಣ್ಯ ಮಂತ್ರಿಯಾಗಿದ್ದಾಗ 20% ಅರಣ್ಯ ಇತ್ತು ಈಗ ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದರೂ ಕೂಡ 1% ಕೂಡ increase ಆಗಿಲ್ಲ ನೀವು ವಿವರ ತರಿಸಿಕೊಂಡು ನೋಡಬೇಕು Foreign Tour ಗಾಗಿ ಇವರು 54 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಆ programme ನಿಂದ ಹೇಗೆ ಇದನ್ನು ಅವರು draw ಮಾಡಿದರು? ಹೇಗೆ ಖರ್ಚು ಮಾಡಿದ್ದಾರೆ? ಎಂಬುದೇ ನನಗೆ ಆಶ್ಚರ್ಯವಾಗುತ್ತಿದೆ ನಾನು ಆ ಇಲಾಖೆಯ ಬಗ್ಗೆ ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಇದರ ಬಗ್ಗೆ ಅಮೂಲಾಗ್ರವಾಗಿ ಮಾತನಾಡುತ್ತೇನೆ ಬಹಳ ದುಡ್ಡನ್ನು ಅವರು waste ಮಾಡುತ್ತಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜೀವಿಜಯರವರು ಮಾನ್ಯ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಅರಣ್ಯ ಮಂತ್ರಿಗಳಾಗಿದ್ದಾಗ ಈ ಅರಣ್ಯ ಇಲಾಖೆಗೆ ಒಂದು ಘನತೆ ಮತ್ತು ಕಾರ್ಯ ಕ್ರಿಯಾ ಯೋಜನೆಗಳು ಬಂದವು ಸಾಮಾಜಿಕ ಅರಣ್ಯದ ಪರಿಕಲ್ಪನೆಯನ್ನು ಅವರು ತಂದಿದ್ದರು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ, ಈಗ ಬೇರೆ ಬೇರೆ ಇಲಾಖೆಗಳಲ್ಲಿ ಅವರು ಕೆಲಸ ಮಾಡುವುದಾಗಿದ್ದರೆ, ಪರಿಣಿತವಾಗಿರತಕ್ಕಂಥ ಅವರ ಕೌಶಲ್ಯವನ್ನು ನಾವು

ದುರುಪಯೋಗ ಮಾಡಿಕೊಂಡಂತಾಗುತ್ತದೆ ಆ ಕಾರಣಕ್ಕಾಗಿ ಇರಬಹಬುದು ಅಥವಾ ಏನೋ ಕಾರಣಕ್ಕಾಗಿ ಇರಬಹುದು, 2006 ರಲ್ಲಿ IFS ವೃಂದದ cadre review meeting ಅನ್ನು ಮಾಡಿದ್ದಾರೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರು ಜೊತೆಗೆ ಮೀಟಿಂಗ್ ಮಾಡಿ ಈ ನಿರ್ಧಾರಕ್ಕೆ ಬಂದಿದ್ದಾರೆ ಇದರಲ್ಲಿ 115 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಬೇಕಾಗಿದೆ 49 ಐಎಫ್ಎಸ್ ಹುದ್ದೆಗಳನ್ನು ಮಾತ್ರ ನಾವು ಪದೋನ್ನತಿ ಕೊಡುವುದರ ಮೂಲಕ ರಾಜ್ಯ ಸರ್ಕಾರದವರಿಗೆ ಕೊಡಲಿಕ್ಕೆ ಅವಕಾಶ ಮಾಡಲಾಗಿದೆ ತಾವು ಹೇಳಿದಂತೆ ನಾವು ಇದರ ಕಡೆಗೆ ಹೆಚ್ಚು ಗಮನ ಕೊಡಬೇಕಾದಂತಹ ಅಗತ್ಯವಿದೆ ಈ ಬಗ್ಗೆಯೂ ಕೂಡ ನಾನು ಸಂಬಂಧಪಟ್ಟಂತಹ ವಿಷಯದ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡುತ್ತೇನೆ ಆಯವ್ಯಯದಲ್ಲಿಯೂ ಕೂಡ ಇದರ ಬಗ್ಗೆ ತಾವು ಹೆಚ್ಚಿನ ಬೆಳಕನ್ನು ಚೆಲ್ಲಿಸಿದರೆ ಒಳ್ಳೆಯದಾಗುತ್ತದೆ ನಾವು ಇವರನ್ನು ಬೇರೆ ಬೇರೆ ಇಲಾಖೆಗಳಿಗೆ ಕಳುಹಿಸಿಕೊಡತಕ್ಕಂಥಾದ್ದು, CEO ಆಗಿ ಕಳುಹಿಸುವುದು, University Registrar ಆಗಿ ಕಳುಹಿಸುವಂಥಾದ್ದು, ಅನ್ಯ ಉದ್ಯೋಗಿಗಳಿಗೆ ಹೋಗತಕ್ಕಂಥಾದ್ದು ಅವರ ಪರಿಣತಿಗೆ ಸರಿ ಹೋಗುವುದಿಲ್ಲ ಆ ಕಾರಣಕ್ಕಾಗಿಯೇ ಈ ಒಂದು ಸಲಹೆ ಉತ್ತಮವಾಗಿದೆ ಅದರ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ (ಶ್ರೀನಿವಾಸಪುರ) – ಮಾನ್ಯ ಜೀವಿಜಯರವರು ಹೇಳಿದಂತೆ, ಸುಮಾರು 725 ಕೋಟಿ ರೂಪಾಯಿಗಳು ಖರ್ಚಾಗಿ ಒಂದು ಪರ್ಸೆಂಟ್ forest wealth ಅನ್ನೂ ಕೂಡ ನಾವು increase ಮಾಡಲಿಕ್ಕೆ ಆಗಿಲ್ಲ ಎನ್ನುವದಾದರೆ, ಇದು ಯಾರ ಕಡೆಗೆ ಬೆರಳು ತೋರಿಸುತ್ತದೆ? ನೀವು watchers ಅಥವಾ forest guard ಅನ್ನು ಇದಕ್ಕೆ ಹೊಣೆ ಮಾಡುತ್ತೀರಾ? ಯಾರ್ಯಾರು ಇದ್ದರು executive post ನಲ್ಲಿ ? ಅವರು ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ? ಎಷ್ಟೆಷ್ಟು ದುಡ್ಡು ಡ್ರಾ ಮಾಡಿದ್ದಾರೆ? plantation ನಲ್ಲಿ ಏನು ಕೆಲಸ ಮಾಡಿದ್ದಾರೆ? ಎಷ್ಟು ಬೆಳೆದಿದ್ದಾರೆ? ಎಂಬ ಬಗ್ಗೆ enquiry ಯೊಂದನ್ನು COD ಕೈಯಲ್ಲೇ ಮಾಡಿಸಿ Catch a few of them ಒಂದು prima facie test ಮಾಡಿ

ಅವರ ಮನೆಗಳು, ಮರಗಳು, ಸಂಬಂಧಗಳು ಏನು ? ಗಾಡಿ ಇತ್ಯಾದಿ ಏನೇನು ಮಾಡಿದ್ದಾರೆ? ಹೊರಗಡೆ ವ್ಯವಹಾರದಿಂದ ಏನೇನು ಗಳಿಸಿದ್ದಾರೆ? ಎಂಬುದನ್ನೆಲ್ಲಾ ನೋಡಿ Criminal prosecution ಮಾಡಿ handcuffs ಹಾಕಿ ಟಿ ವಿ ಯಲ್ಲಿ ತೋರಿಸಿ ಡಿಫರೆಂಟ್ ಚಾನಲ್ಸ್‌ಗಳು ಇವೆ, ಜನ ಅವುಗಳನ್ನು ನೋಡಿ ಸಂತೋಷ ಪಡಲಿ ಇದಕ್ಕೇನು budgetary allocation ಬೇಕಾಗಿಲ್ಲ you need a will ಯೂಕಲಿಪ್ಟಸ್ ತನ್ನಷ್ಟಕ್ಕೆ ತಾನು ಬೆಳೆದುಕೊಳ್ಳುವುದು ಬಿಟ್ಟರೆ ಬೇರೆ ಏನು ಬೆಳೆದಿದ್ದಾರೆ? ಇವರ ಪುಣ್ಯಕ್ಕೆ ನಮ್ಮಲ್ಲಿ ತನ್ನಷ್ಟಕ್ಕೆ ತಾನು ಬೆಳೆಯುತ್ತಿದ್ದ ಹೊಂಗೆ ಮರಗಳೂ ಕೂಡ ಬೆಳೆಯುವಂತಿಲ್ಲ ಇವರೆಲ್ಲಾ ಕಬ್ಜಾ ಹಿಡಿದುಕೊಂಡಿದ್ದಾರೆ There is a bigger demand to get postings to Bellary & Srinivaspur, not to go to Coorg ಇಲ್ಲಿ ಪ್ಲಾಂಟೇಶನ್ ಕೆಲಸ ಸಿಗುತ್ತದೆ ಇವರು ಪ್ಲಾಂಟೇಶನ್ ಅನ್ನು ಎಲ್ಲಿ ಮಾಡುತ್ತಾರೆ ಗೊತ್ತೆ ? ಡಿ ಎಫ್ ಓ ಆಫೀಸ್‌ನಲ್ಲಿ ಅಕೌಂಟೆಂಟ್ ರೂಮ್‌ನಲ್ಲಿ ಇವರು ಅದನ್ನು ಮಾಡುತ್ತಾರೆ ಇವರೆಲ್ಲಾ ಪೇಪರ್ ಮೇಲೆ ಪ್ಲಾಂಟೇಶನ್ ಮಾಡುತ್ತಾರೆ ಭೂಮಿ ಮೇಲೆ ಗಿಡ ನೆಡುವ ಪ್ರಶ್ನೆಯೇ ಇಲ್ಲ ಇದೊಂದು ಜಾದು, ಇದೊಂದು ವಿದ್ವತ್, ಪೇಪರ್ ಮೇಲೆ ಗಿಡ ನೆಡತಕ್ಕಂಥ ಕಾರ್ಯಕ್ರಮಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ತಿಂದು ಜೀರ್ಣಿಸಿಕೊಂಡು, ಸಾಮಂತರಂತೆ ಮೆರೆಯುತ್ತಿರತಕ್ಕಂಥ ಈ ಪವಾಡ, ಭೂಲೋಕದಲ್ಲಿ ಎಲ್ಲೂ ಇಲ್ಲ, ನಮ್ಮಲ್ಲಿ ಮಾತ್ರ ಇದೆ ಭೂಮಿಗೂ ಗಿಡಕ್ಕೂ ಸಂಬಂಧವೇ ಇಲ್ಲ ಎಲ್ಲಾ ಪೆನ್ನು, ಪೇಪರ್ ಮತ್ತು ಗಿಡದಲ್ಲೇ ಮುಗಿದು ಹೋಗುತ್ತದೆ ಎಲ್ಲಾ ಗಿಡಗಳನ್ನು ಇವರು ಪೇಪರ್ ಮೇಲೆಯೇ ಬೆಳೆದಿದ್ದಾರೆ ಸ್ವಲ್ಪ I want an assurance, a positive assurance At least ಒಂದೈದು ಜನರಿಗೆ, 'ಇಂಥವರು ಕಳ್ಳರು' ಎಂದು ಶಿಕ್ಷೆ ಕೊಡಿಸಿ ಯಾವಾಗಲೂ ನಮ್ಮನ್ನು ಮತ್ತು ನಿಮ್ಮನ್ನು ಮಾತ್ರ 'ಕಳ್ಳರು' ಎಂದು ಹೇಳುತ್ತಾರೆ ಮಧ್ಯಾಹ್ನ ನೋಡಿ, ನಿಮ್ಮ ಮೇಲೆ ನಾವು, ನಮ್ಮ ಮೇಲೆ ನೀವು, ಇಬ್ಬರೂ ಕೆಸರು ಎರಚಿಕೊಂಡೆವು ಮಾನ್ಯ ರಾಮಸ್ವಾಮಿಯವರು ಸುಮಾರು ಜನರ ಬಗ್ಗೆ ಹೇಳಿದರು ಬರೇ ನಮ್ಮದೇ ನಾವು ತೆಗೆದುಕೊಳ್ಳುತ್ತಿದ್ದೇವೆ, let us spare some time towards these people also ಹೌದೋ? ಅಲ್ಲವೋ? ಸ್ವಲ್ಪ kindly ಇದರ ಬಗ್ಗೆ ನೋಡಿ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್ ರವರು ಹೇಳಿದಂಥಾದ್ದು ನಿಜ Public Accounts Committee ಯಲ್ಲಿ ನಾವೆಲ್ಲಾ ಇದ್ದಂತಹ ಸಂದರ್ಭದಲ್ಲಿ ಈ ಬಗ್ಗೆ ವರದಿಯನ್ನೂ ಕೂಡ ಕೊಟ್ಟಿದ್ದೆವು ಪಶ್ಚಿಮಘಟ್ಟಗಳಲ್ಲಿ ಆಗಿರತಕ್ಕಂಥ ಅವ್ಯವಹಾರ, ಜಪಾನ್ ನೆರವಿನ ಯೋಜನೆಯಲ್ಲಿ ಆಗಿರತಕ್ಕಂಥ ಅವ್ಯವಹಾರ ಇವುಗಳ ಬಗ್ಗೆ ವರದಿ ಕೊಟ್ಟರೂ ಕೂಡ ಇದುವರೆಗೂ ಅದರ ಬಗ್ಗೆ ಕ್ರಮ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ ಅದಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎನ್ನಬಹುದು ಅಥವಾ ಅದಕ್ಕೆ ಇನ್ನೇನೋ ಕಾರಣಗಳೂ ಇರಬಹುದು, ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ತಾವು ಹೇಳಿದಂತೆ, ಈಗ ಖಂಡಿತವಾಗಿಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ ಬರೇ ರಾಜಕಾರಣಿಗಳೇ ಇದಕ್ಕೆ ತಪ್ಪು ಮಾಡುತ್ತಾರೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಎಲ್ಲರೂ ಕೂಡ ಇದರಲ್ಲಿ ಸೇರಿರುವುದರಿಂದ, ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳತಕ್ಕಂಥ ಅಗತ್ಯತೆ ಇದೆ ನಮ್ಮ ಬಳ್ಳಾರಿಯಲ್ಲಿ ಗಣಿ ಇರತಕ್ಕಂಥ ಕಾರಣಕ್ಕಾಗಿ ಎಲ್ಲಿಲ್ಲದಂತಹ ಬೇಡಿಕೆ ಬಂದಿದೆ ಅಲ್ಲಿ ಅರಣ್ಯ ಬೆಳೆಸುವ ಪ್ರಶ್ನೆಯೇ ಇಲ್ಲ ಅರಣ್ಯ ಕಡಿದು ಹೇಗೆ ನಾಶ ಮಾಡಬೇಕು ಎಂದು ಕಲಿಯಬಹುದು ಅಲ್ಲಿ ತಮಾಷೆ ಎಂದರೆ, ಒಂದು ಸಲ ಅರಣ್ಯ ಇಲಾಖೆಯ ಅಧಿಕಾರಿಗಳು ಹರಿದು ಬಂದಿರತಕ್ಕಂಥ ಕಬ್ಬಿಣದ ಅದಿರು ಗುಂಡಿಗಳಲ್ಲಿ ಮತ್ತು ಮರ ಗಿಡಗಳಲ್ಲಿ ತಡೆದು ನಿಂತಿದ್ದು, ಇದನ್ನು ನಾವು ಏಲಂ ಮಾಡುತ್ತೇವೆ ಎಂದು ಹೇಳಿದರು ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಮಂತ್ರಿಯಾಗಿ ಅಧಿಕಾರಕ್ಕೆ ಬಂದ ಸ್ವಲ್ಪ ದಿವಸಗಳಲ್ಲಿಯೇ, ಅದನ್ನು ಹರಾಜು ಮಾಡಬೇಕೆಂದು ಪ್ರಕಟಣೆ ಕೊಡಲಾಯಿತು ಹರಾಜು ಪ್ರಕಟಣೆಯಲ್ಲಿ ಇಂತಹ ದಿವಸ ನೀವು ಹರಾಜಿನಲ್ಲಿ ಭಾಗವಹಿಸಬಹುದು ಎಂದು ಹೇಳಲಾಯಿತು ಅವತ್ತು ರಾತ್ರಿಯೇ ಟೆಂಡರ್ ಓಪನ್ ಮಾಡಿದರು ಪತ್ರಿಕೆಯಲ್ಲಿ ಹರಾಜು ನೋಟೀಸ್ ಪ್ರಕಟವಾಯಿತು, ಸಾಯಂಕಾಲವೇ ಟೆಂಡರ್ ಕರೆದರು ಯಾವ್ಯಾವ ರೀತಿಯಲ್ಲಿದೆಯೋ ಅದನ್ನು ಆಯಾ ರೀತಿಯಲ್ಲಿಯೇ ನೀವು ಖರೀದಿ ಮಾಡಿಕೊಳ್ಳಬಹುದು ಎಂದು ಹೇಳಲಾಯಿತು ಅದರ ಮೇಲೆ ಎಷ್ಟೆಲ್ಲಾ ಪ್ರತಿಭಟನೆಗಳನ್ನು ಮಾಡಿದರೂ ಕೂಡ, ಎಲ್ಲಾ ಇಲಾಖೆಯವರೂ ಕೂಡ ನಾವು ತಪ್ಪನ್ನು ಮಾಡಿಲ್ಲವೆಂದೇ ಉತ್ತರಗಳನ್ನು ಕೊಡುತ್ತಿದ್ದರು ಕೊನೆಗೆ ಹರ

ಹಿಡಿದು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಧರ್ಮಸಿಂಗ್‌ರವರ ಹತ್ತಿರ ಹೇಳಿದ ಮೇಲೆ, ಅದನ್ನು ನಿಲ್ಲಿಸಿದರು ಆದರೆ ಈಗ, ನಾನು ನೋಡುತ್ತಿದ್ದೇನೆ, ಅದನ್ನು ನಿಲ್ಲಿಸಿದ್ದೇ ಪಾಪ ಆಗಿ ಹೋಗಿದೆ ಆಗ ಸ್ವಲ್ಪವಾದರೂ ಬರುತ್ತಿತ್ತು ಎನಿಸುತ್ತದೆ ಈಗ ಅವು ಇಲ್ಲವೇ ಇಲ್ಲ ಎಲ್ಲಾ ಹೊರಟು ಹೋಗಿ ಬಿಟ್ಟಿದೆ ಇಂತಹ ಪರಿಸ್ಥಿತಿಯಾಗಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಮೊನ್ನೆ KDP Meeting ನಲ್ಲಿ ನೋಡಿದರೆ, ಈ ಅರಣ್ಯ ಇರತಕ್ಕಂಥಾದ್ದು ಕೇವಲ 12% ರಾಜ್ಯದಲ್ಲಿ 20% ಎಂದು ಹೇಳುತ್ತಾರೆ, 15% ಅಂತೂ ಇರಬಹುದು, ಆದರೆ, ನಮ್ಮಲ್ಲಿ ಮಾತ್ರ 12% ಆಗಿದೆ ಅದೂ ಕೂಡ ಸಂಡೂರು, ಕೂಡ್ಲಿಗಿ ಭಾಗಗಳನ್ನು ಬಿಟ್ಟರೆ, ಉಳಿದಂತೆ ಎಲ್ಲವೂ ಬೋಳು ಬೋಳು ಪ್ರದೇಶಗಳೇ ಆಗಿವೆ ಆದ್ದರಿಂದ, ನೀವು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಇದರ ಕಡೆ ಗಮನಹರಿಸುವಂತೆ ಹೇಳಿ, ನಮ್ಮ ಸರ್ಕಾರದಲ್ಲಿ ಇದನ್ನು ಪ್ರಸ್ತಾಪ ಮಾಡುತ್ತೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ – Legislature ನಿಂದ ಏನಾದರೂ ಕೆಲವರನ್ನು ಅರಣ್ಯ ಇಲಾಖೆಗೆ Deputation ಮೇಲೆ ಕಳುಹಿಸಿಕೊಡುವುದಕ್ಕೆ provision ಇದ್ದರೆ, ಆ ಬಳ್ಳಾರಿ ಏರಿಯಾಕ್ಕೆ ನನ್ನನ್ನು Forester ಆಗಿಯೋ, Ranger ಆಗಿಯೋ ಕಳುಹಿಸುವುದಕ್ಕೆ ನಾನೇನೂ ACF ಕೇಳಲಿಲ್ಲ, CCF ಕೇಳಲಿಲ್ಲ, ಇಲ್ಲವೇ, ಕೆಳಗೆ Watcher ಆದರೂ ಪರವಾಗಿಲ್ಲ ಅದಕ್ಕೇನಾದರೂ ಸಾಧ್ಯವಾಗುತ್ತದೆಯೇ, ಆಲೋಚನೆ ಮಾಡಿ ನೋಡಿ

ಶ್ರೀ ಎಂ ಪಿ ಪ್ರಕಾಶ್ – ಇವರೇ ಹೋಗುತ್ತೇವೆಂದು ಹೇಳಿರುವುದರಿಂದ ಇವರ ವಿದ್ಯಾರ್ಹತೆಯನ್ನು ನಾವು ನೋಡುವುದಿಲ್ಲ ಇವರು ಹೆಬ್ಬೆಟ್ಟು ಒತ್ತುತ್ತಾರೆಂದು ನನಗೆ ಗೊತ್ತಿರುವುದರಿಂದಲೂ ಕೂಡ ಮತ್ತು ಇವರಿಗೆ ಎಷ್ಟೇ ವಯಸ್ಸಾಗಿದೆ ಎಂದರೂ ಕೂಡ ನಾವು ಅದನ್ನೆಲ್ಲಾ ಮಾಡಿ ಎಲ್ಲದಕ್ಕೂ ಕೂಡ ನಾವು ವಿನಾಯಿತಿ ಕೊಟ್ಟು ನೇರವಾಗಿ ಅಲ್ಲಿಗೆ "Conservator of Forest for Bellary" ಎಂತಲೇ ಹಾಕಿಬಿಡುತ್ತೇವೆ! ಏನು ಪ್ರಶ್ನೆಯೋ ಇದು?

(ನಗು)

ಉಪಾಧ್ಯಕ್ಷರು – ರಾಯರೆಡ್ಡಿಯವರೆ, ನಿಮ್ಮ ಪ್ರಶ್ನೆ ಇಲ್ಲಿದೆ ಆದರೆ, ಮಂತ್ರಿಗಳಿಲ್ಲ ಅವರು ಉತ್ತರಿಸಲು 15 ದಿವಸಗಳ ಕಾಲ time ಕೇಳಿದ್ದಾರೆ

(ಮಾನ್ಯ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಬೇರೆ ಆಸನದಲ್ಲಿ ಕುಳಿತು ಮಾತನಾಡಿದ್ದರಿಂದ ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಅವರ ಮಾತುಗಳನ್ನು ದಾಖಲಿಸಿಕೊಳ್ಳಲಾಗಲಿಲ್ಲ)

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ದಿನಾಂಕ 27 3 07 ರಂದು 19ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 134 ಪ್ರಶ್ನೆಗಳ ಪೈಕಿ 107 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಉಪಾಧ್ಯಕ್ಷರು :– ಮಂಡಿಸಲಾಯಿತು

ಉಪಾಧ್ಯಕ್ಷರು :– ಈಗ ಸದನವನ್ನು ನಾಳೆ ಬೆಳಿಗ್ಗೆ 10 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಸಂಜೆ 7 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 28ನೇ ಮಾರ್ಚ್ ಮಾಹೆ 2007ರ ಬುಧವಾರದಂದು ಬೆಳಿಗ್ಗೆ 10 30 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ – 1

1424 (1816) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ).– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

130